ಬಳ್ಳಾರಿ	19092
ರಾಯಚೂರು	23587
ಗುಲ್ಬರ್ಗಾ	27800
ಬೀದರ್	6502
ಒಟ್ಟು	**351671**

ಬೆಂಗಳೂರು ನಗರ ಕಾರ್ಪೋರೇಷನ್ ಕೌನ್ಸಿಲ್ ಹಾಲ್ ನಿರ್ಮಾಣಕ್ಕೆ ತಗುಲಿದ ವೆಚ್ಚ.

309-ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರ ಕಾರ್ಪೋರೇಷನ್‌ನಿಂದ ನಿರ್ಮಿಸುತ್ತಿರುವ ಹೊಸ ಕೌನ್ಸಿಲ್ ಹಾಲ್ ನಿರ್ಮಾಣಕ್ಕೆ ತಗಲಿರುವ ಒಟ್ಟು ಹಣದ ವೆಚ್ಚವೆಷ್ಟು ?*

ಆ) *ಈಗ ಅದು ಯಾವ ಹಂತದಲ್ಲಿದೆ ಹಾಗೂ ಅದು ಯಾವಾಗ ಮುಗಿಯಲಿದೆ?*

ಇ) *ಈ ಹೊಸ ಕೌನ್ಸಿಲ್ ಹಾಲ್ ನಿರ್ಮಾಣ ಮಂದಗತಿಯಲ್ಲಿ ನಡೆಯಲು ಕಾರಣಗಳೇನು, ಹಾಗೂ ಅದರ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?*

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ಅಂದಾಜು 300.00 ಲಕ್ಷ

ಆ) ಕೆಲಸವು ಪ್ರಗತಿಯಲ್ಲಿದ್ದು ಇನ್ನು ಆರು ತಿಂಗಳಲ್ಲಿ ಮುಗಿಯುಬಹುದೆಂದು ಉದ್ದೇಶಿಸಲಾಗಿದೆ.

ಇ) ಹೊಸ ಕೌನ್ಸಿಲ್ ಹಾಲ್ ನಿರ್ಮಾಣದ ನಿವೇಶನದಲ್ಲಿ ಹಾಲಿ ಇದ್ದ ಕಟ್ಟಡಗಳನ್ನು ಕೆಡವಿ ನಿವೇಶನವನ್ನು ಗುತ್ತಿಗೆದಾರರಿಗೆ ವಹಿಸಿಕೊಡುವುದರಲ್ಲಿ ಮತ್ತು ಹೊಸ ಕಟ್ಟಡವನ್ನು ಮೊದಲು ಕಟ್ಟಲು ಉದ್ದೇಶಿಸಲಾಗಿದ್ದ ಸ್ಥಳದಿಂದ 60 ಮೀ.ನಷ್ಟು ಸ್ಥಳಾಂತರಿಸಿದ್ದರಿಂದ ಪ್ರಾರಂಭದಲ್ಲಿ ಕೆಲಸವು ವಿಳಂಬವಾಗಿದೆ.

ಸಣ್ಣ ಉಳಿತಾಯ ಇಲಾಖೆಯವರ ಪ್ಯಾಕೆಟ್ ಕ್ಯಾಲೆಂಡರ್‌ಗಳ ಸಂಖ್ಯೆ.

310-ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ) : ಮಾನ್ಯ ಸಣ್ಣ ಉಳಿತಾಯ, ರಾಜ್ಯ ಲಾಟರಿ ಹಾಗೂ ವಿಮಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *1992ನೇ ಜನವರಿಯಲ್ಲಿ ವಿತರಣೆ ಮಾಡಿದ ಸಣ್ಣ ಉಳಿತಾಯ ಪ್ಯಾಕೆಟ್ ಕ್ಯಾಲೆಂಡರುಗಳು ಮತ್ತು ಗೋಡೆಯ ಕ್ಯಾಲೆಂಡರುಗಳು ಒಟ್ಟು ಸಂಖ್ಯೆ ಎಷ್ಟು ?*

ಆ) *ಪ್ರತಿಗೋಡೆಯ ಕ್ಯಾಲೆಂಡರು ಮತ್ತು ಪ್ಯಾಕೆಟ್ ಕ್ಯಾಲೆಂಡರುಗಳಿಗೆ ತಗುಲಿದ ವೆಚ್ಚವೆಷ್ಟು ?*

ಇ) *ಈ ಕ್ಯಾಲೆಂಡರುಗಳನ್ನು ಎಲ್ಲಿ ಮುದ್ರಿಸಲಾಯಿತು ?*

ಈ) *ಈ ಕ್ಯಾಲೆಂಡರುಗಳನ್ನು ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸದಿರುವ ಕಾರಣಗಳೇನು ?*

ಶ್ರೀ ಟಿ.ಎಂ. ಮಂಜುನಾಥ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ ಹಾಗೂ ವಿಮಾ ರಾಜ್ಯ ಮಂತ್ರಿಗಳು) :

ಅ) ಪ್ಯಾಕೆಟ್ ಕ್ಯಾಲೆಂಡರು : ಮೂರು ಲಕ್ಷ (ಉಚಿತ ವಿತರಣೆ)